**ಓ ಎಸ್ ನಂಃ 41/2018**

**ಪಿ. ಡಬ್ಲ್ಯೂ ಃ 2**

**ದಿಃ 17.12.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ಕೆ.ಜಿ.ಎಸ್ ವಕೀಲರಿಂದ**

**7.** ನಾನು ಮೆಡಿಕಲ್ ಶಾಪ್ ನಡೆಸುತ್ತಿದ್ದೇನೆ. ನಾನು ಡಿಪ್ಲೋಮಾ ವ್ಯಾಸಂಗ ಮಾಡಿದ್ದೇನೆ. ನನ್ನ ತಂದೆ ಹಾಗೂ 1 ನೇ ಪ್ರತಿವಾದಿ ಶಾಲಾ ದಿನದಿಂದಲೂ ಸ್ನೇಹಿತರು ಎಂದರೆ ಸರಿ. ಈ ದಾವೆಯ ವ್ಯವಹಾರವನ್ನು ಕೂಡ ನಾನೇ ಮಾಡಿರುವುದು ಎಂದರೆ ಸರಿ. ನಾನು ನನ್ನ ಹೆಸರಿಗೆ ನನ್ನ ತಂದೆಯ ಪರಿಚಯದ ಮೇರೆಗೆ ಪ್ರತಿವಾದಿಯಲ್ಲಿ ವ್ಯವಹಾರ ಮಾಡಿ ಬರೆಸಿಕೊಳ್ಳಲು ಹೋಗಿದ್ದೆ ಎಂದರೆ ಸರಿಯಲ್ಲ. ಮೊದಲಿಗೆ ಗೋವಿಂದಪ್ಪ, ನನ್ನ ತಂದೆ, ವೆಂಕಟರಮಣ್ಣ ಹಾಗೂ ನಾನು ಹೋಗಿದ್ದೆವು ಎಂದರೆ ಸಾಕ್ಷಿ ನಾನು, ವಾದಿ ಹಾಗೂ ನನ್ನ ತಂದೆ ಹೋಗಿದ್ದೆವು ಎಂದು ನುಡಿಯುತ್ತಾರೆ. ಆಗ ವಾದಿ ಯಾರು ಎಂದು ಪ್ರತಿವಾದಿಗಳಿಗೆ ಪರಿಚಯ ಇರಲಿಲ್ಲ ಎಂದರೆ ಸರಿ. ನಂತರ ಕೂಡ ಮೇಲೆ ಹೇಳಿದ 4 ಜನರು ಹೋಗಿದ್ದೆವು ಎಂದರೆ ಸಾಕ್ಷಿ ಮೇಲೆ ಹೇಳಿದ 3 ಜನರು ಮಾತ್ರ ಹೋಗಿದ್ದೆವು ಎಂದು ನುಡಿಯುತ್ತಾರೆ. ಅಲ್ಲಿ ಮಾತುಕತೆ ನನ್ನ ತಂದೆ ಮಾಡಿರುವುದು ಎಂದರೆ ಸರಿ. ವಾದಿಗೆ ಪ್ರತಿವಾದಿಗಳ ಪರಿಚಯ ಇರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ವಾದಿ ವ್ಯವಹಾರದಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ಮುಂಚೆ ಇರಲಿಲ್ಲ ಎಂದು ನುಡಿಯುತ್ತಾರೆ.

**08.** ಕ್ರಯದ ಕರಾರು ಪತ್ರಕ್ಕೆ ಪ್ರತಿವಾದಿಯ ಮನೆಯಲ್ಲಿ ಸಹಿ ಮಾಡಿಸಿರುವುದು ಎಂದರೆ ಸಾಕ್ಷಿ ಸೋಲೂರಿನಲ್ಲಿ ಮಾಡಿಸಿರುವುದು ಎಂದು ನುಡಿಯುತ್ತಾರೆ. ಆ ಎಲ್ಲ ವ್ಯವಹಾರ ಪ್ರತಿವಾದಿಗಳ ಮನೆಯಲ್ಲೇ ನಡೆದಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರು ಪತ್ರಕ್ಕೆ ಸಹಿ ಮಾಡುವಾಗ ವಾದಿ, ನಾನು ಮತ್ತು ನನ್ನ ತಂದೆ ಮಾತ್ರ ಇದ್ದೆವು. ಬೇರೆ ಯಾರು ಇರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಪ್ರತಿವಾದಿ, ಅವರ ಮಗ ಹಾಗೂ ಹೆಂಡತಿ ಇದ್ದರು

ಎಂದರೆ ಸಾಕ್ಷಿ ನಾನು ನಮ್ಮ ಕಡೆಯವರಿಂದ ಹೋದ ಬಗ್ಗೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

**09.** ವಾದಿಗೆ ಕರಾರುಪತ್ರ ರದ್ದು ಮಾಡಲಾಗಿದೆ ಎಂದು ನೋಟೀಸ್ ನ್ನು ಪ್ರತಿವಾದಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸ್ನೇಹಿತ ಸಾಫ್ಟ್ ವೇರ್ ಇಂಜೀನಿಯರ್ ಮುರಳಿ ಎಂದರೆ ಸರಿ. ಮೇಲೆ ಹೇಳಿದ 4 ಜನ ಹಾಗೂ ಮುರಳಿ ರವರು ಆ ನೋಟೀಸ್ ಕೊಟ್ಟ ನಂತರ ಪ್ರತಿವಾದಿಗಳ ಮನೆಗೆ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಲ್ಲದೆ ಅವರೆಲ್ಲ ಪ್ರತಿವಾದಿಗಳ ವಕೀಲರ ಕಚೇರಿಗೆ ಕೂಡ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಪ್ರತಿವಾದಿ ಪರ ವಕೀಲರು ಬೇಗ ವ್ಯವಹಾರವನ್ನು ಮುಗಿಸಿ, 1 ನೇ ಪ್ರತಿವಾದಿಗೆ ಕಿಡ್ನಿ ಸಮಸ್ಯೆಯಿಂದ ರೂ. 12 ಲಕ್ಷ ಖರ್ಚಿಗೆ ಇದೆ ಎಂದು ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಅಲ್ಲಿ ಬಂದಿದ್ದ ಅವರುಗಳು ಅದಕ್ಕೆ ಒಪ್ಪಲಿಲ್ಲ ಹಾಗೂ ನಂತರ 6 ತಿಂಗಳು ಪ್ರತಿವಾದಿಯನ್ನು ಭೇಟಿ ಆಗಿಲ್ಲ ಎಂದರೆ ನನಗೆ ತಿಳಿದಿಲ್ಲ.

**10.** ಟಾರ್ಚರ್ ಕೊಡುತ್ತಿದ್ದೀರಿ ಎಂದು ವಾದಿಗೆ ಪ್ರತಿವಾದಿಗಳು ನೋಟೀಸ್ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮನೆ ಸೋಲೂರಿನ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲೇ ಇದೆ ಎಂದರೆ ಸರಿ. ಸದರಿ ಕ್ರಯದ ಕರಾರುಪತ್ರ ಆದ ನಂತರ ಸದರಿ ರಾಷ್ಟ್ರೀಯ ಹೆದ್ದಾರಿ ಆಗಲೀಕರಣಕ್ಕೆ ಪ್ರಸ್ತಾವನೆಗೊಂಡಿತ್ತು ಎಂದರೆ ಸರಿಯಲ್ಲ. ವಾದಿ ಹಾಗೂ ನನ್ನ ತಂದೆ ಹಣ ವಾಪಸ್ ಕೊಡಿ ಎಂದು ಪ್ರತಿವಾದಿಗೆ ಒತ್ತಡ ಹಾಕುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ವಾದಿ ಯಾರು ಎಂದು ಗೊತ್ತಿಲ್ಲದೆ ಇದ್ದುದ್ದರಿಂದ ಸ್ವತ್ತನ್ನು ನಮಗೆ ಮಾರಾಟ ಮಾಡಿರುವುದು ಎಂದು ವ್ಯವಹಾರ ಮಾಡಿರುವುದು ಎಂದರೆ ಸರಿಯಲ್ಲ. ನನ್ನ ತಂದೆ ಅವರ ಸ್ನೇಹವನ್ನು ದುರುಪಯೋಗ ಮಾಡಿ ಈ ರೀತಿ ಚಿತಾವಣೆ ಮಾಡಿರುವುದು ಎಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿ ಮುಂದೆ ಕ್ರಯದ ಕರಾರುಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನನಗೆ ಎಂದು ಹೇಳಿ ಆ ಕರಾರುಪತ್ರ ಮಾಡಿಸಿರುವುದು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳೆಲ್ಲ ಸುಳ್ಳು ವಿಚಾರಗಳು

ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**